ಸಂಬಂಧಿ ಚರ್ಚೆಯೂ ಇದೆ. ಸೋಮದೇವ ಸೂರಿಯ ಸಂಸ್ಕೃತದ 'ಯಶಸ್ತಿಲಕ' ಚಂಪೂ ಕಾವ್ಯ ಮತ್ತು ಪುಷ್ಪದಂತ ಕವಿಯ ಪ್ರಾಕೃತದ 'ಜಸಹರ ಚರಿವು' ಎರಡೂ ಕಾವ್ಯಗಳ ನಂತರ ಹನ್ನೊಂದನೆಯ ಶತಮಾನದಲ್ಲಿ ವಾದಿರಾಜನು ಸಂಸ್ಕೃತದಲ್ಲಿ 'ಯಶೋಧರ ಚರಿತೆ' ಯನ್ನು ಬರೆದಿರುವುದುಂಟು. ಯಶೋಧರ ಚರಿತೆ ಬಗೆಯ ಕಥೆಗಳು ಜನಪದ ಜಗತ್ತಿನಲ್ಲಿಯೂ ಇದ್ದಿರಬೇಕು. ಪುರುಷರನ್ನು ಬಿಟ್ಟು ಹೊರಟ ಸ್ತ್ರೀಯರ ಕಥೆಗಳು ಕಥಾಸರಿತ್ಸಾಗರ ಮತ್ತು ಜಾತಕ ಕಥೆಗಳಲ್ಲೂ ಹೆಚ್ಚು ದೊರೆಯುತ್ತದೆ. ಇವೆಲ್ಲವೂ ಕ್ರಿಸ್ತಶಕದ ಆರಂಭದಲ್ಲಿ ಹೇಳಲ್ಪಡುತ್ತಾ ಬರಹ ರೂಪಕ್ಕೆ ಬಂದಿರಬಹುದು.

ಕಥಾಸರಿತ್ಸಾಗರದಲ್ಲಿ ಬರುವ ಕುಮುದಿಕೆ, ಚಂದ್ರಶ್ರೀ, ದುಶ್ಶೀಲೆ, ಘಟಕರ್ಪರ, ರುದ್ರಸೋಮ, ಶಶಿ, ರುಂಡಪುರುಷ ಈ ಬಗೆಯ ಕಥೆಗಳೆಲ್ಲವೂ ಅಮೃತಮತಿ–ಅಷ್ಟಾವಂಕರ ಪ್ರಣಯ ಮಾದರಿಯಲ್ಲಿ ಕಾಣಿಸಿಕೊಳ್ಳುತ್ತವೆ. ಹೇಮಚಂದ್ರನ ಪರಿಶಿಷ್ಟ ಪೂರ್ವದಲ್ಲಿ, ರಾಣಿಯೊಬ್ಬಳು ಮಾವುತನೊಬ್ಬನನ್ನು ಮೋಹಿಸಿ ಅವನಿಂದಲೇ ಚಾಟಿಯ ಏಟು ತಿನ್ನುವ ಕಥೆ ಇದೆ. ಇದನ್ನು ಕಂಡ ರಾಜ ತನ್ನ ರಾಣಿಯನ್ನು, ಮಾವುತನನ್ನು ಉಗ್ರವಾಗಿ ಶಿಕ್ಷಿಸುತ್ತಾನೆ. ಧನಶ್ರೀ ಎಂಬ ಹೆಂಗಸು ಧನ ಎಂಬ ತರುಣ, ಶ್ರಿಮಂತ ವರ್ತಕನನ್ನು ಗಂಡನನ್ನಾಗಿ ಪಡೆದೂ ನಂದಕ ಎಂಬ ಸೇವಕನನ್ನು ಪ್ರೀತಿಸುತ್ತಾಳೆ. ಗಂಡನಿಗೆ ವಿಷ ಹಾಕಿ ಸಾಯದಿರಲು, ಸಮುದ್ರ ಪ್ರಯಾಣದಲ್ಲಿ ಅವನನ್ನು ನೀರಿಗೆ ತಳ್ಳಿಬಿಡುತ್ತಾಳೆ. ಲಕ್ಷ್ಮಿ ಎಂಬ ಹೆಂಗಸು ಧರಣ ಎಂಬ ತರುಣ ಹಾಗೂ ಶ್ರೀಮಂತ ವರ್ತಕ ಗಂಡನನ್ನು ಪಡೆದಿದ್ದರೂ ಒಬ್ಬ ಕಳ್ಳನನ್ನು ಇಷ್ಟಪಡುತ್ತಾಳೆ, ಗಂಡನನ್ನು ಕೊಲ್ಲ ಬಯಸುವಳು. ಈ ಬಗೆಯ ಕಥೆಗಳು ದ್ರಾವಿಡ ಮೂಲ ಕೃತಿಗಳಲ್ಲಿಯೇ ಹೆಚ್ಚು ಕಾಣಿಸಿಕೊಳ್ಳುವುದರಿಂದ ಅವು ಆರ್ಯ ಮೂಲದವಲ್ಲ ಎಂದು ಸಂಸ್ಕೃತ ವಿದ್ವಾಂಸರಾದ ಡಾ. ಕೆ. ಕೃಷ್ಣಮೂರ್ತಿ ಅವರು ಅಭಿಪ್ರಾಯಪಡುತ್ತಾರೆ.

ಮಧ್ಯ ಭಾರತದ ಗುಜರಾತಿ ಜನಪದ ತಂಬೂರಿ ಕಥನದಲ್ಲಿ ಮತ್ತು ಕರ್ನಾಟಕದ ಜನಪದ ಗೀತೆಗಳಲ್ಲಿಯೂ ಕೂಡ ಗಂಡನನ್ನು ಬಿಟ್ಟು ಬೇರೊಬ್ಬನನ್ನು ಅರಸಿಹೋದ ಅಥವಾ ಹೋಗಬೇಕೆಂದು ಬಯಸಿ ಆ ಬಗೆಯ ಹಟ ಸಾಧಿಸುವ ಹೆಂಗಸರ ಕಥೆಗಳು ಕೇಳಲು ಸಿಗುತ್ತವೆ. 'ಗಂಡ್ನ ಕೊಂದ ಹೊನ್ನಮ್ಮನ ಕಥೆ', 'ಯಲುರಾಜನ ಮಡದಿ' ಈ ಕನ್ನಡ ಜನಪದ ಗೀತೆಗಳು ಅಮೃತಮತಿಯ ಕಥನವನ್ನು ಹೋಲುತ್ತವೆ. ಗಂಡನನ್ನು ತೊರೆಯುವ ಅಥವಾ ಗಂಡನಿಲ್ಲದೆ ಪರಪುರುಷನನ್ನು ಬಯಸುವ ಹೆಣ್ಣು ಮಕ್ಕಳು ಯಾರೆಂದರೆ ಅವರ ಪುರುಷರು ಬಹುಪಾಲು ದೂರ ಪ್ರಯಾಣದ ವರ್ತಕರಾಗಿರುತ್ತಾರೆ. ಇಲ್ಲವೇ ಸೈನಿಕರಾಗಿರುತ್ತಾರೆ ಅಥವಾ ದೇಶ ಆಳುವ ಹಲವು ಪತ್ನಿಯರ ಅರಸರಾಗಿರುತ್ತಾರೆ. ಶಿಷ್ಟ ಪ್ರಕಾರದಲ್ಲಿ ಗಂಡಂದಿರಿಂದ ಬಿಡುಗಡೆಯಾಗುವ ಸಂಗತಿ ಅಷ್ಟಿಷ್ಟು ಗುಟ್ಟಿನಂತೆ ಕಾಣಿಸಿಕೊಂಡರೆ, ಜನಪದ ಪರಂಪರೆಯಲ್ಲಿ ಆಗಾಗ ನೇರವಾಗಿ ಕಾಣಿಸಿಕೊಳ್ಳುತ್ತದೆ. 'ಒಳ್ಳೇ ಗಂಡನ್ನ ಬಿಟ್ಟೆ, ಎಳ್ಳು ಹೊಲವ ಬಿಟ್ಟೆ, ಗುದ್ದಾಡೊ ಜೋಗಿಕೂಟೆ ಬರಬೋದೆ...', ಅಥವಾ–

ಗಂಡ ದಂಡಿಗೋಗುವಾಗ
ಬೀಗ ಜಡಿದು ಹೋದನಲ್ಲ
ಜಡಿದ ಬೀಗ ಒಡೆದುಬಿದ್ದು

ಮೂರು ಮಕ್ಕಳ ಹಡೆದನೇ... ಎಂಬೀ ಬಗೆಯ ಪದ್ಯಗಳು ಅಸಂಖ್ಯಾತ ಕಾಣಿಸಿಕೊಳ್ಳತ್ತವೆ. ಇದರೊಂದಿಗೆ ಪಾತಿವ್ರತ್ಯದ ಪಾರಮ್ಯವನ್ನು ಹೇಳುವ ಗರತಿಯ ಹಾಡಿನ ಮಾದರಿಯ ತ್ರಿಪದಿಗಳೂ ಇವೆ. ಸತ್ತ ಗಂಡನನ್ನೂ ಬದುಕಿಸಿಕೊಳ್ಳುವ ಶಕ್ತಿ ಪಾತಿವ್ರತ್ಯಕ್ಕೆ ಇದೆ ಎಂಬ ಕ್ರಮದಲ್ಲಿ ಮರಳಿನ ಮಡಕೆಗಳನ್ನು ಸೃಷ್ಟಿಸಿ ಪತಿವ್ರತಾ ಸ್ತ್ರೀಯರ ತಲೆಯ ಮೇಲೆ ಹೊರಿಸಲಾಗಿದೆ. ಆದರೆ ತುಂಬಿದ ಮಡಕೆಗಳು ಒಡೆದು ನೀರು ಸೋರಿ ಹೋದದ್ದು ಉಂಟು. ಮನಸ್ಸನ್ನು ಮೋಹವೇ ಹಾರಿಸಿಕೊಂಡು ಹೋಯಿತು ಎಂಬುದನ್ನು ಗಮನಿಸಬೇಕು. ಕ್ರಿಸ್ತ ಪೂರ್ವ ಮತ್ತು ತದನಂತರದಲ್ಲಿ ವ್ಯಾಪಾರೀ